ದಿನಾಂಕ : 29.07.2024
ಅಸಲು ದಾವೆ: 37/2015 ರಿಂದ 40/2015
ಡಿ.ಡಬ್ಲ್ಯು: 3

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ :**

ನಾನು 2 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಬೆಂಗಳೂರಿನಲ್ಲಿ ವಾಸವಿರುವುದಿಲ್ಲ, ತರಿಕೆರೆಯಲ್ಲಿ ವಾಸವಿರುತ್ತೇನೆ. ನನಗೆ ಇಂಗ್ಲೀಷ್ ಬರುವುದಿಲ್ಲ. ನೀವು ಹಾಕಿರುವ ಪ್ರಮಾಣ ಪತ್ರ ಇಂಗ್ಲೀಷ್ ನಲ್ಲಿ ಇದೆ ಎಂದರೆ ಸಾಕ್ಷಿ ಕನ್ನಡದಲ್ಲಿ ಇದೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಅವರು ಸಲ್ಲಿಸಿರುವ ಪ್ರಮಾಣ ಪತ್ರವನ್ನು ತೋರಿಸಿ ಇದು ಇಂಗ್ಲೀಷ್ ನಲ್ಲಿ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಇಂಗ್ಲೀಷ್ ನಲ್ಲಿ ಇದೆ ಎಂದು ಹೇಳುತ್ತಾರೆ. ಇದರಲ್ಲಿ ಏನು ಬರೆದಿದೆ ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ನಮ್ಮ ಲಾಯರ್ ಹೇಳಿದ್ದನ್ನು ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ನೀವೇನಾದರೂ ಬೆಂಗಳೂರಿಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಬೆಂಗಳೂರಿನಲ್ಲಿ ತಯಾರು ಮಾಡಿಕೊಂಡು ಬಂದಿರುವುದಕ್ಕೆ ನೀವು ಮದ್ದೂರಿನಲ್ಲಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಅವರು ಎಲ್ಲಾ ಓದಿ ಹೇಳಿದರು, ಬೆಂಗಳೂರಿನಲ್ಲಿ ಸಹಿ ಮಾಡಿದ್ದೇನೆ ಬೆಂಗಳೂರಿಗೆ ಹೋಗಿದ್ದೆ ಎಂದು ಉತ್ತರಿಸುತ್ತಾರೆ. ಬೆಂಗಳೂರಿನಲ್ಲಿಯೇ ಪ್ರಮಾಣ ಪತ್ರ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಬೆಂಗಳೂರಿಗೆ ಹೋಗಿದ್ದ ತಾರೀಖು, ತಿಂಗಳು ಇಸವಿ ಹೇಳುವಿರಾ ಎಂದರೆ ಸಾಕ್ಷಿ ತಾರೀಖು ಗೊತ್ತಿಲ್ಲ ಕಳೆದ ತಿಂಗಳು ಹೋಗಿದ್ದೆ ಎಂದು ಉತ್ತರಿಸುತ್ತಾರೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನಿಮಗೇನು ಗೊತ್ತಿಲ್ಲ, ಬೆಂಗಳೂರಿಗೆ ಹೋಗಿ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸಾಕ್ಷಿ ಇಲ್ಲ ಹೋಗಿದ್ದೇನೆ ಎಂದು ಉತ್ತರಿಸುತ್ತಾರೆ.

ದಾವಾ ಸ್ವತ್ತನ್ನು ನಾನು ನೋಡಿರುವುದಿಲ್ಲ, ನಮ್ಮ ಲಾಯರ್ ಹತ್ತಿರ ಕೇಳಿ ತಿಳಿದುಕೊಂಡಿದ್ದೇನೆ. ಶಿಂಷಾ ಹೊಳೆಯನ್ನು ದೊಡ್ಡ ಹೊಳೆ ಎಂದು ಸಹಾ ಕರೆಯುತ್ತಾರೆ ಎಂದರೆ ಸರಿ. ಪೂರ್ವಕ್ಕೆ :ಶಿಂಷಾ ಹೊಳೆ, ಪಶ್ಚಿಮಕ್ಕೆ : ಚಿಕ್ಕಣ್ಣನವರ ಜಮೀನು, ಉತ್ತರಕ್ಕೆ

ಃ ರಾಜುರವರ ಜಮೀನು ಮತ್ತು ದಕ್ಷಿಣಕ್ಕೆ ಃ ತಿಮ್ಮಯ್ಯರವರ ಜಮೀನು ಈ ಚೆಕ್ ಬಂದಿ ಒಳಗೆ ಇರುವ ಜಮೀನು ನೋಡಿದ್ದೀರಾ ಎಂದರೆ ಸಾಕ್ಷಿ ದಕ್ಷಿಣಕ್ಕೆ ತಿಮ್ಮಯ್ಯರವರು ಇಲ್ಲ ಎಂದು ಉತ್ತರಿಸುತ್ತಾರೆ. ಪೂರ್ವಕ್ಕೆ ಃಶಿಂಷಾ ಹೊಳೆ, ಪಶ್ಚಿಮಕ್ಕೆ ಃ ನರಸಿದಹಯ್ಯರವರ ಜಮೀನು, ಉತ್ತರಕ್ಕೆ ಃ ಕಿರಂಗೂರು ಎಲ್ಲೆ ಮತ್ತು ದಕ್ಷಿಣಕ್ಕೆ ಃ ತಿಮ್ಮಯ್ಯ ಮತ್ತು ಇತರರು, ಹಳ್ಳ ಮತ್ತು ಕೊರಕಲು ಈ ಚೆಕ್ ಬಂದಿ ಒಳಗಿನ ಜಮೀನನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ, ಚೆಕ್ ಬಂದಿ ತಪ್ಪಾಗಿದೆ, ತಿಮ್ಮಯ್ಯ ಎಂಬ ಚೆಕ್ ಬಂದಿ ತಪ್ಪಾಗಿದೆ ಎಂದು ಉತ್ತರಿಸುತ್ತಾರೆ. ಈಗ ಹೇಳಿದ ಚೆಕ್ ಬಂದಿ ಸರ್ವೆ ನಂ.7 ಎಂದರೆ ಸಾಕ್ಷಿ ಸರಿ ಆದರೆ ದಕ್ಷಿಣದ ಚೆಕ್ ಬಂದಿ ತಪ್ಪು ಇದೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.7 ರ ಮೂಲ ಸರ್ವೆ ನಂಬರ್ ಯಾವುದು ಎಂದರೆ ಸಾಕ್ಷಿ ಸರ್ವೆ ನಂ.7 ಇತ್ತು ಎಂದು ಉತ್ತರಿಸುತ್ತಾರೆ. ಮೂಲ ಸರ್ವೆ ನಂಬರ್ 6 ಇದ್ದದ್ದು ಎರಡು ಭಾಗವಾಗಿ ಒಂದು ಭಾಗ ಸರ್ವೆ ನಂ.6 ಮತ್ತು ಇನ್ನೊಂದು ಭಾಗ ಸರ್ಬೆ ನಂ.7 ಆಗಿದೆ ಎಂದರೆ ಸಾಕ್ಷಿ ಇಲ್ಲ ಸರ್ವೆ ನಂ.6 ಆರೇ ಇತ್ತು ಮತ್ತು ಸರ್ವೆ ನಂ.7 ಏಳೇ ಇತ್ತು ಎಂದು ಉತ್ತರಿಸುತ್ತಾರೆ. ಸರ್ವೆ ನಂ.6 ಮತ್ತು 7 ರ ವಿಚಾರ ನನಗೆ ಸುಮಾರು 20 ವರ್ಷಗಳಿಂದ ಗೊತ್ತು.

ಸರ್ವೆ ನಂ.6 ರಲ್ಲಿ ಕರಿಗೌಡರವರು ಸ್ವಾಧೀನದಲ್ಲಿ ಇದ್ದಾರೆ. ಈ ದಾವಾ ಹಾಕಿರುವವರು ನ್ಯಾಯಾಲಯಕ್ಕೆ ಹಾಜರುಪಡಿಸಿರುವ 1905 ರ ಕ್ರಯ ಪತ್ರವನ್ನು ನೋಡಿದ್ದೇನೆ. ಆ ಕ್ರಯ ಪತ್ರದಲ್ಲಿ ಈ ಮೇಲೆ ಓದಿ ಹೇಳಿದ ಚೆಕ್ ಬಂದಿ ನಮೂದಾಗಿದೆ ಎಂದರೆ ಸಾಕ್ಷಿ ನಾನು ಓದಿಲ್ಲ ನಮ್ಮ ಲಾಯರ್ ಹತ್ತಿರ ತಿಳಿದುಕೊಂಡಿದ್ದೇನೆ, ಅದರ ಚೆಕ್ ಬಂದಿ ತಪ್ಪಾಗಿದೆ ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ಲಾಯರ್ ಹತ್ತಿರ ಕೇಳಿ ತಿಳಿದುಕೊಂಡಾಗ ಏನು ತಪ್ಪಾಗಿದೆ ಎಂದು ಕೇಳಿ ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ ಸರ್ವೆ ನಂಬರ್ ತಪ್ಪಾಗಿದೆ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ನಿಮ್ಮ ವಕೀಲರು ಮೊದಲು ಸರ್ವೆ ನಂ.6 ಇದ್ದದ್ದು ಆನಂತರ ಎರಡು ಭಾಗವಾಗಿ 1911 ರಲ್ಲಿ ಸರ್ವೆ ನಂ.6 ರ ಒಂದು ಭಾಗ 7 ಆಗಿದೆ ಎಂದು ಹೇಳಲಿಲ್ಲವಾ ಎಂದರೆ ಸಾಕ್ಷಿ 6 ಆರೇ ಇದೆ ಮತ್ತು 7 ಏಳೇ ಇದೆ ಎಂದು ಹೇಳಿದ್ದಾರೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.6 , 1911 ರಲ್ಲಿ ರೀಸರ್ವೆ ಆದ ದಾಖಲಾತಿಯನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ರೀಸರ್ವೆ ಆಗಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ.1 ತೋರಿಸಿ ಸದರಿ ದಾಖಲಾತಿಯನ್ನು ಓದಲು ಆಗುವುದಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ರೀ ಸರ್ವೆ ಎಂದು ಇದೆ, ಅದನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ದಾಖಲಾತಿಯನ್ನು

ಸೃಷ್ಟಿಮಾಡಿಕೊಂಡಿದ್ದಾರೆ ಎಂದು ನೀವೇನಾದರೂ ಆ ದಾಖಲಾತಿಯನ್ನು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

ನನ್ನ ತಂದೆಯ ಹೆಸರು ಬೋರೆಗೌಡ, ನನ್ನ ತಾತನ ಹೆಸರು ಮರಿಗೌಡ. ನನ್ನ ತಾತನ ಹೆಸರಿನಲ್ಲಿ ದಾಖಲೆಗಳು ಇರುವುದಿಲ್ಲ. ಮರಿಯಕ್ಕನವರ ಹೆಸರಿನಲ್ಲಿ ದಾಖಲೆಗಳು ಇವೆ. ಸದರಿ ಮರಿಯಕ್ಕ ನನಗೆ ಮುತ್ತಜ್ಜಿಯಾಗಬೇಕು. ಮುತ್ತಜ್ಜಿ ಎಂದರೆ ನಮ್ಮ ತಂದೆಯ ತಾಯಿಯ ತಾಯಿ ಎಂದು ಉತ್ತರಿಸುತ್ತಾರೆ. ಮರಿಯಕ್ಕನವರ ಹೆಸರಿನಲ್ಲಿ ಇದ್ದ ಆರ್.ಟಿ.ಸಿ, ಮ್ಯೂಟೇಷನ್, ಇಂಡೆಕ್ಸ್ ಮತ್ತು ಕಂದಾಯ ಪಾವತಿ ರಶೀದಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಎಷ್ಟು ವರ್ಷಗಳಿಂದ ಮರಿಯಕ್ಕನವರ ಹೆಸರಿನಲ್ಲಿ ಆ ದಾಖಲೆಗಳು ಬರುತ್ತಿವೆ ಎಂದರೆ ಸಾಕ್ಷಿ ನೂರು ವರ್ಷಗಳಿಂದ ಎಂದು ಉತ್ತರಿಸುತ್ತಾರೆ. ನೂರು ವರ್ಷದ ಯಾವ ಯಾವ ದಾಖಲಾತಿ ನೋಡಿದ್ದೀರಿ ಎಂದರೆ ಸಾಕ್ಷಿ ಆರ್.ಟಿ.ಸಿ. ಇಂಡೆಕ್ಸ್, ಆಕಾರ್ ಬಂದ್, ಎಂ.ಆರ್. ಕಂದಾಯ ರಶೀದಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಈ ದಾಖಲಾತಿಗಳೆಲ್ಲವೂ 1961 ರ ಈಚೆಗೆ ಬಂದಂತಹ ದಾಖಲಾತಿಗಳು ನೀವು ಹೇಳುವಂತೆ 100 ವರ್ಷಗಳಿಂದ ಇರಲೇ ಇಲ್ಲ ಎಂದರೆ ಸಾಕ್ಷಿ ಯಾವಾಗಿಂದ ಪ್ರಾರಂಭವಾದವು ಆಗಿನಿಂದ ಅವರ ಹೆಸರಿಗೆ ಬರುತ್ತಿವೆ ಎಂದು ಉತ್ತರಿಸುತ್ತಾರೆ.1937 ರಲ್ಲಿ ಹಿಸ್ಸಾ ಸರ್ವೆ ಆಗಿದೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಯಾವುದು ಆಗಿಲ್ಲ ಎಂದು ಉತ್ತರಿಸುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.